ಓಎಸ್.148/2017 ಡಿಡಬ್ಲ್ಯೂ1

ದಿನಾಂಕಃ **04.07.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎ ಎಸ್ ವಿ ವಕೀಲರಿಂದಃ

ಮೂಲ ದಾವಾ ಸಂಖ್ಯೆ 313/2016 ರ ತೀರ್ಪಿನ ವಿರುದ್ಧ ವಾದಿ ಮೇಲ್ಮನವಿ ಸಲ್ಲಿಸಿದ್ದು ಆರ್ ಎ ನಂ.71/2024 ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ಮುಂದೆ ವಿಲೇವಾರಿಗೆ ಬಾಕಿ ಇದೆ ಎಂದರೆ ಸರಿ . ಒಂಡರಬಾಳು ಗ್ರಾಮದ ಸರ್ವೆ ನಂ.167 ಜಮೀನನ್ನು ನಾನು ಸರ್ವೆ ಮಾಡಿಸಿರುತ್ತೇನೆ. ಆ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಈಗ್ಗೆ 15 ದಿನಗಳ ಹಿಂದೆ ದಾವಾ ಸ್ವತ್ತಿನಲ್ಲಿರುವ ವಾದಿಯ ಸ್ವಾಧೀನತೆಗೆ ತೊಂದರೆ ಕೊಟ್ಟ ಕಾರಣ ವಾದಿ ಮಾನ್ಯ ಪೋಲೀಸ್ ಅಧೀಕ್ಷಕರು ಮುಂದೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪೋಲೀಸ್ ಅಧೀಕ್ಷಕರು ನೀಡಿದ ನೋಟೀಸನ್ನು ನಾನು ಉದ್ದೇಶಪೂರ್ವಕವಾಗಿ ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.167 ಇಲ್ಲಿಯವರೆಗೂ ದುರಸ್ತ ಕಾರಣ ನನಗೆ ನನ್ನ ಜಮೀನು ಎಲ್ಲಿದೆ ಎಂದು ಗೊತ್ತಿಲ್ಲದ ಕಾರಣ ವಾದಿಯ ಜಮೀನನ್ನು ನನ್ನ ಜಮೀನು ಎಂದು ಹೇಳಿ ದಾವಾ ಸ್ವತ್ತಿನಲ್ಲಿರುವ ವಾದಿಯ ಸ್ವಾಧೀನತೆಗೆ ದಕ್ಕೆಯುಂಟು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.